ಆದುದರಿಂದ ಸಿ.ಓ.ಡಿ. ತನಿಖೆಯಾಗುತ್ತದೆಂದು ಹೇಳಿದ್ದಾರೆ.

ಶ್ರೀ ಸಿ.ಎಂ.ಲಿಂಗಪ್ಪ: ಇಂದು ಕೋರ್ಟ್‌ನವರೂ ಕೂಡ ಇಂಥ ಕೇಸ್‌ಗಳ ಬಗ್ಗೆ ಬಹಳ ಸಿರಿಯಸ್ಸಾಗಿ ನಿರ್ಣಯಗಳನ್ನು ಕೊಡುತ್ತಿದ್ದಾರೆ. ಕೋರ್ಟ್ ಬಹಳ ಕಾಷಿಯಸ್ ಆಗಿ ಕೆಲಸ ಮಾಡುತ್ತಿವೆ. ಇಂಥ ಕೇಸ್‌ಗಳಲ್ಲಿ ಲಘುವಾಗಿ ಪರಿಗಣಿಸಿ ಬೇಲ್ ಮೇಲೆ ಆರೋಪಿಗಳನ್ನು ಬಿಡುತ್ತಿಲ್ಲ.

ಅಧ್ಯಕ್ಷರು: ಕೋರ್ಟ್ ಕೂಡ ಬಹಳ ಸಿರಿಯಸ್ಸಾಗಿ ಇದನ್ನು ತೆಗೆದುಕೊಳ್ಳುತ್ತದೆ. ಅಫೆಂಡರ್ ಕೂಡ ಬಹಳ ಸೀರಿಯಸ್ಸಾಗಿ ಅವರ ಕೆಲಸವನ್ನು ಮುಂದುವರಿಸಿಕೊಂಡೇ ಹೋಗುತ್ತಿದ್ದಾರೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ಈ ಘಟನೆ ಬಗ್ಗೆ ಸಿ.ಓ.ಡಿ. ತನಿಖೆ ಮಾಡಿಸಬೇಕು.

ಅಧ್ಯಕ್ಷರು: ಈಗಾಗಲೇ ಒಪ್ಪಿಸಿಯಾಗಿದೆ.

(ಊ) ಬೆಂಗಳೂರು ಕಂಠೀರವ ಕ್ರೀಡಾಂಗಣದ ಬಳಿ ಸರ್ಕಾರಿ ಭೂಮಿಯನ್ನು ಖಾಸಗೀಯವರು ಒತ್ತುವರಿ ಮಾಡಿಕೊಳ್ಳುತ್ತಿರುವುದು.

+ ಶ್ರೀ ಸಿ.ಎಂ.ಲಿಂಗಪ್ಪ (ರಾಮನಗರ): ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿರತಕ್ಕಂಥ ಸರ್ಕಾರಿ ಭೂಮಿಗಳು ಇತರೆ ಇಲಾಖೆಯ ಅಧೀನದಲ್ಲಿರುವ ಭೂಮಿಗಳು ಹಸ್ತಾಂತರವಾಗುತ್ತಿರುವ ವಿಚಾರದಲ್ಲಿ ಸಹಜವಾಗಿ ಒಂದು ಕುತೂಹಲ ಮೂಡಿ ಅದರ ಬಗ್ಗೆ ಇಲ್ಲಿ ತಮ್ಮ ಮೂಲಕ ಪ್ರಸ್ತಾಪ ಮಾಡಬೇಕೆಂದು ನಮ್ಮ ಆಶಯವನ್ನು ವ್ಯಕ್ತಪಡಿಸುತ್ತಿದ್ದೇವೆ. ಆದರೆ ದುರಾದೃಷ್ಟ, ಇವೊತ್ತು ಬೆಂಗಳೂರು ಪಟ್ಟಣದ ಬಗ್ಗೆ ಜವಾಬ್ದಾರಿ ಹೊತ್ತು ಮಂತ್ರಿಗಳು ಇಲ್ಲಿ ಇಲ್ಲ.

8.40 ಪಿ.ಎಂ

ಬೆಂಗಳೂರನ್ನು ನೋಡಿದಂತಹವರು ಹಿಂದಿನಿಂದಲೂ ಕೂಡ ಈಗಲೂ ಕೂಡ ನಾನಾ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಾರೆ. ಅದು ಒಂದು ಸುಂದರವಾದ ನಗರ, ಗಾರ್ಡನ್ ಸಿಟಿ ಇತ್ಯಾದಿ, ಇತ್ಯಾದಿ. ಇತ್ತೀಚೆಗೆ ಅದು ಗಾರ್ಡನ್ ಸಿಟಿ ಆಗಿ ಉಳಿದಿದೆಯೋ ಅಥವಾ ಕಾಂಕ್ರೀಟ್ ಕಟ್ಟಡಗಳ ಕಾಡಾಗುತ್ತಿದೆಯೋ ಒಂದೂ ಹೇಳುವುದಕ್ಕೆ ಬರುವುದಿಲ್ಲ. ಆದರೆ ಇವತ್ತು ಬೆಂಗಳೂರು ನಗರದಲ್ಲಿ ವಾಹನಗಳ ಚಾಲನೆ ನೋಡಿದಾಗ, ವಾಹನಗಳ ಚಾಲನೆಗೆ ಮತ್ತು ವಾಹನಗಳ ನಿಲುಗಡೆಗೆ ಬಹಳಷ್ಟು ಅನಾನುಕೂಲವಾಗುತ್ತಿದೆ. ರಸ್ತೆ ಬದಿಯಲ್ಲಿ ಕಟ್ಟಡಗಳನ್ನು ಕಟ್ಟುವಾಗ ನಿಯಮಾನುಸಾರವಾಗಿ ರಸ್ತೆ ಮಧ್ಯಭಾಗದಲ್ಲಿ ಇಷ್ಟು ಜಾಗ ಬಿಟ್ಟು ಕಟ್ಟಬೇಕು ಎನ್ನುವ

ನಿಯಮವನ್ನು ಪಾಲಿಸದೆ ಇರುವುದು. ಮಾನ್ಯ ಲೋಕೋಪಯೋಗಿ ಸಚಿವರು ಇಲ್ಲಿ ಇದ್ದಾರೆ. ನಮ್ಮ ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ ಬೆಂಗಳೂರು ವ್ಯಾಪ್ತಿಯೊಳಗೆ ಇರತಕ್ಕಂಥ ಟಿ.ಹೆಚ್.ಇ.ಎಲ್ ಎದುರುಗಡೆ ರಸ್ತೆ ಪಕ್ಕಕ್ಕೆ ಒಂದು ಕಟ್ಟಡವನ್ನು ಕಟ್ಟುತ್ತಿದ್ದಾರೆ. ತಾವು ಅದನ್ನು ಪರಿಶೀಲನೆ ಮಾಡಿಸಬೇಕು. ಅವರಿಗೆ ಅಲ್ಲಿ ಅನುಮತಿ ಯಾರು ಕೊಟ್ಟವರು? ಅವರಿಗೆ ಲೈಸೆನ್ಸ್ ಕೊಟ್ಟವರು ಯಾರು? ಯಾವರೀತಿ ಅವರು ಈ ಸರ್ಕಾರಿ ಭೂಮಿಯಲ್ಲಿ ಅದನ್ನು ಕಟ್ಟುತ್ತಿದ್ದಾರೆ? ಅದನ್ನು ವಿಚಾರಣೆ ಮಾಡಬೇಕಾಗುತ್ತದೆ. ಇವತ್ತು ಮಧ್ಯಾಹ್ನ ಕೂಡ ಇದರ ಬಗ್ಗೆ ಪ್ರಸ್ತಾಪವಾಗಿದೆ. ಇವತ್ತು ಕಂಠೀರವ ಸ್ಟೇಡಿಯಂ ಜಾಗ ಏನೇನೂ ಸಾಲದು. ಅಲ್ಲಿ ಇರತಕ್ಕಂಥ 15 ಗುಂಟೆ ಪ್ರದೇಶವನ್ನು ಖಾಸಗಿ ಒಡೆತನದಲ್ಲಿ ಇರತಕ್ಕಂಥ ಆಸ್ಪತ್ರೆಗೆ ಪಾರ್ಕಿಂಗ್‌ಗೋಸ್ಕರ ಬಿಟ್ಟುಕೊಡತಕ್ಕಂಥ ಒಂದು ನಡವಳಿಕೆ ಸರ್ಕಾರದಲ್ಲಿ ನಡೆಯುತ್ತಿದೆ. ಇದು ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಕೂಡ 3-4 ಬಾರಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದರೂ ಕೂಡ ಇದಕ್ಕೆ ಸರ್ಕಾರ ಒಪ್ಪಿರಲಿಲ್ಲ. ಸರ್ಕಾರ ಏಕೆ ಈ ರೀತಿ ಮಾಡುತ್ತಿದೆ ಎಂಬುದು ಅರ್ಥವಾಗುತ್ತಿಲ್ಲ. ಅಲ್ಲಿ ಜಾಗವೇ ಇಲ್ಲ. ಇನ್ನು ಅನೇಕ ಕ್ರೀಡಾಭಿವೃದ್ಧಿಗೆ ಬೇಕಾಗಿರುವಾಗ ಸರ್ಕಾರ ಇದನ್ನು ಹಸ್ತಾಂತರ ಮಾಡತಕ್ಕಂಥ ವಿಚಾರವನ್ನು ಕೂಡಲೇ ನಿಲ್ಲಿಸಬೇಕು. ಈಗಾಗಲೇ ಅಲ್ಲಿ ಹಾಕಿದಂತಹ ತಡೆ ಬೇಲಿಯನ್ನು ತುಂಡೀಕರಿಸಿ ಅಲ್ಲಿ ಒಂದು ರ್‍ಯಾಂಪ್‌ನ್ನು ನಿರ್ಮಾಣ ಮಾಡಿ ವಾಹನ ಹತ್ತುವುದಕ್ಕೆ ಇಳಿಯುವುದಕ್ಕೆ ಸಿದ್ಧಪಡಿಸಿಕೊಂಡಿದ್ದಾರೆ. ದಯಮಾಡಿ ಸರ್ಕಾರದವರು ಇದನ್ನು ನಿಲ್ಲಿಸಿ ಸರ್ಕಾರದ ಭೂಮಿ ಯಾವರೀತಿಯಲ್ಲೂ ಹಸ್ತಾಂತರ ಆಗದೆ ಇರುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಹೇಳುತ್ತೇನೆ.

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್: ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆ ಈ ವಿಷಯದ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಆಗ ಮಾನ್ಯ ಸದಸ್ಯರು ಇರಲಿಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು: ಯಾವುದು ಇದು ವಿಚಾರ? ನಾನು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ.

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್: ಕಂಠೀರವ ಸ್ಟೇಡಿಯಂ ಕಾರ್ ಪಾರ್ಕಿಂಗ್ ವಿಚಾರವನ್ನು ಬೆಳಿಗ್ಗೆ ನಾನು ಉತ್ತರ ಹೇಳಿದ್ದೇನೆ. ಇನ್ನೊಮ್ಮೆ ಹೇಳುತ್ತೇನೆ. ಈ ತರಹ ಯಾವುದೇ ಜಾಗವನ್ನು ಯಾವುದೇ ಖಾಸಗಿ ಸಂಸ್ಥೆಗೆ ಕೊಟ್ಟಿಲ್ಲ, ಕೊಡುವುದಿಲ್ಲ, ಎನ್ನುವ ಮಾತನ್ನು ಸ್ಪಷ್ಟಪಡಿಸುತ್ತೇನೆ.

ಶ್ರೀ ಸಿ.ಎಂ.ಲಿಂಗಪ್ಪ: ಅಲ್ಲಿ ತಂತಿ ಬೇಲಿ ಕಡಿದು ಹಾಕಿದ್ದಾರೆ

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್: ತಂತಿ ಬೇಲಿ ಒಡೆದಿದ್ದು ನಿಜ. ಬೆಳಿಗ್ಗೆ ಹೇಳಿದ್ದೇನೆ, ಈಗಾಗಲೇ ಹೇಳಿದ್ದೇನೆ.

ಅಧ್ಯಕ್ಷರು: ಬೆಳಿಗ್ಗೆ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಈಗ ಪ್ರಮೀಳಾ ನೇಸರ್ಗಿಯವರು ಆಬ್ಸೆಂಟ್, ಬಸವನಗೌಡ ಪಾಟೀಲ್ ಆಬ್ಸೆಂಟ್, ಶ್ರೀಮಾರೆಡ್ಡಿ ಆಬ್ಸೆಂಟ್,ಪುಟ್ಟಣ್ಣಯ್ಯ ಆಬ್ಸೆಂಟ್ ಈಗ ಚಿಮ್ಮನಕಟ್ಟಿ ಮಾತನಾಡಿ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೇ, ಈಗ ಬಹಳ ಅನಿವಾರ್ಯತೆಯಿಂದ ಇದನ್ನು ಪ್ರಸ್ತಾಪ ಮಾಡಬೇಕಾಗಿದೆ.

ಅಧ್ಯಕ್ಷರು: ಹೇಳಿ ತೊಂದರೆ ಇಲ್ಲ.

(ಊ) ಬಾಗಲ ಕೋಟೆ ಜಿಲ್ಲೆ ಉದ್ಘಾಟನೆ ಸಂದರ್ಭದಲ್ಲಿ ಶಾಸಕರಿಗೆ ಅಗೌರವ ಸೂಚಿಸಿರುವುದು.

+ ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮೊನ್ನೆ ಆಗಸ್ಟ್ 15 ರಂದು ನಮ್ಮ ಬಾಗಲಕೋಟೆ ಜಿಲ್ಲೆ ಉದ್ಘಾಟನೆಯಾಯಿತು. ಅಂದು ಜಿಲ್ಲೆ ಅಸ್ತಿತ್ವಕ್ಕೆ ಬಂದಿತು. ಆ ಒಂದು ಶುಭ ಸಂದರ್ಭದಲ್ಲಿ ನಾವು ವೇದಿಕೆ ಮೇಲೆ ಕೂಡ ಹಾಗೂ ಸದನದಲ್ಲೂ ಸರ್ಕಾರದ ಈ ಒಳ್ಳೆಯ ಕೆಲಸಕ್ಕಾಗಿ ಅವರನ್ನು ಶ್ಲಾಘನೆ ಮಾಡಿದ್ದೇವೆ. ಅಂದು ಆ ಕಾರ್ಯಕ್ರಮದಲ್ಲಿ ಒಳ್ಳೆಯ ಮಾತುಗಳನ್ನು ಎಲ್ಲರೂ ಕೂಡ ಆಡಿದ್ದೇವೆ. ಅಂತಹ ಒಂದು ಐತಿಹಾಸಿಕ ಸಂದರ್ಭ ಬಂದಾಗ ಆ ಜಿಲ್ಲೆಗೆ ಸಂಬಂಧಪಟ್ಟಿರತಕ್ಕಂಥ ಎಲ್ಲಾ ಶಾಸಕರುಗಳನ್ನು ಕೂಡ ಒಂದು ಮರ್ಯಾದೆ ಕೊಡತಕ್ಕಂಥ ಕೆಲಸವನ್ನು ಸರ್ಕಾರದವರು ಮಾಡಬೇಕಾಗಿತ್ತು. ಅಲ್ಲಿ ಕಾರ್ಡ್ ಪ್ರಿಂಟ್ ಮಾಡಿಸಿದ್ದರು. ಎಲ್ಲಾ ಶಾಸಕರ ಹೆಸರುಗಳನ್ನು ಹಾಕಿಸಿ ಅವರಿಗೆ ವಿಶೇಷ ಆಮಂತ್ರಿತರನ್ನಾಗಿ ಮಾಡಿದ್ದರು. ಇದು ಅಗೌರವ ತರತಕ್ಕಂಥ ಕೆಲಸ. ಹೋಗಲಿ ಅದೂ ಅಲ್ಲದೆ ಅಲ್ಲಿ ಮಾನ್ಯ ಮುಖ್ಯಮಂತ್ರಿಗಳು ಶಿಲಾನ್ಯಾಸ ಮಾಡಿದರು. ಡಿ.ಸಿ. ಆಫೀಸ್ ಮಾಡಿದರು, ಪೊಲೀಸ್ ವರಿಷ್ಠಾಧಿಕಾರಿಗಳ ಆಫೀಸ್‌ನ್ನು ಮಾಡಿದರು. ಆ ಶಿಲಾನ್ಯಾಸ ಮಾಡಿದ್ದರಲ್ಲಿ ಅಲ್ಲಿ ಪ್ರತಿನಿಧಿಸತಕ್ಕಂಥ ಯಾವ ಶಾಸಕರುಗಳ ಹೆಸರೂ ಕೂಡ ಇರಲಿಲ್ಲ. ಇದನ್ನು ನಾನು ಏಕೆ ಹೇಳುತ್ತೇನೆಂದರೆ ಯಾವುದೋ ಒಂದು ತಾಲ್ಲೂಕು ಅಥವಾ ಕ್ಷೇತ್ರದಲ್ಲಿ ಕಾರ್ಯಕ್ರಮವಾಗಿದ್ದರೆ ನಾವು ಅಷ್ಟೊಂದು ಪ್ರಾಮುಖ್ಯತೆ ಕೊಡುತ್ತಿರಲಿಲ್ಲ. ಇದೊಂದು ಐತಿಹಾಸಿಕ ಕಾರ್ಯಕ್ರಮ. ಈ ಕಾರ್ಯಕ್ರಮದನ್ವಯ ಅಲ್ಲಿ ನನ್ನೊಬ್ಬನ ಹೆಸರು ಎಂದು ಹೇಳುವುದಿಲ್ಲ. ಅಲ್ಲಿ ಸಂಬಂಧಪಟ್ಟಿರತಕ್ಕಂಥ ಜಿಲ್ಲಾ ಶಾಸಕರ ಹೆಸರುಗಳನ್ನು ಹಾಕದೇ ಇರುವುದು ಸರ್ಕಾರದ ಒಂದು ದೊಡ್ಡ ನ್ಯೂನ್ಯತೆ. ಆ ನ್ಯೂನ್ಯತೆಯನ್ನು ಹೋಗಿಸುವುದಕ್ಕೆ ಸರ್ಕಾರ ಏನು ಕಾರ್ಯಕ್ರಮ ಕೈಗೊಳ್ಳುತ್ತದೆಂದು ಕೇಳುತ್ತೇನೆ.

+ ಶ್ರೀ ಅಜಯ್‌ಕುಮಾರ್ ಸರ್‌ನಾಯಕ್ (ಕ್ರೀಡಾ ಮತ್ತು ಯುವಜನ ಸೇವಾ ಸಚಿವರು): ಮಾನ್ಯ ಅಧ್ಯಕ್ಷರೇ, ಬಾಗಲಕೋಟೆ ಜಿಲ್ಲೆ ಉದ್ಘಾಟನೆ ಆಗುವಂತಹ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಕಾರ್ಡ್‌ನ್ನು ಪ್ರಿಂಟ್ ಮಾಡಿದ್ದರು ಅದರಲ್ಲಿ ಆ